

ದಿಟ್ಟಿಸುತ್ತಿದ್ದ ಹಾಗೆ, ಆಕಾಶದಿಂದ ಚಾಚಿದ ಮುಳ್ಳುಗಳುಳ್ಳ ಈಟಿಯೊಂದು ಕಂಡುಬಂತು. ಅದು ಕೂಡಲೇ ಅವನ್ನನ್ನು ಒಂದು ಪಕ್ಕದಿಂದ ಎತ್ತಿತ್ತು. ಅವನು ಮಧ್ಯದಲ್ಲಿ ನೇತುಬಿದ್ದಿದ್ದಾಗ ಧ್ವನಿಯೊಂದು ಕೇಳಿಬಂತು. 'ಹೆಂಗಸರು ಮತ್ತು ಮಕ್ಕಳನ್ನು ಹೇಡಿಯಾಗಿ ಕೊಂದ ಕಟುಕನೇ, ನೀನು ಇಲ್ಲಿ ಹರಿಸಿದ ಚಿಕ್ಕ ಯಜಮಾನನ, ಅವನ ತಾಯಿಯ ಮತ್ತು ತಂದೆಯ ರಕ್ತದಿಂದ ಪವಿತ್ರವಾದ ನೆಲದ ಮೇಲೆ ಕಾಲಿಡಲು ಏನು ಧೈರ್ಯ ನಿನಗೆ? ಮೂರೂ ರಕ್ತಗಳು ಒಂದೇ ಎಳೆಯಾಗಿ ಹರಿದಿವೆ ಇಲ್ಲಿ. ನೀನೇ ನೋಡುತ್ತಿದ್ದೀಯ. ಯಾರೂ ರಕ್ತವನ್ನು ಕೊಲ್ಲಲಾರರು. ಮಾಂಸದ ಜೀವಕ್ಕಿಂತ ಹೆಚ್ಚು ಮುಖ್ಯವಾಗಿರುವುದು ರಕ್ತ ! ಅವರ ರಕ್ತ ಸದಾ ಇರುತ್ತದೆ. ಅದು ಉಪ್ಪಿನ ಸರೋವರವಿರುವ ಬೋಳು ಬಯಲನ್ನು ಉದ್ದೀಪಿಸುತ್ತದೆ, ಯಾವ ದೈವಗಳ ಹಾಡುಗಳನ್ನು ಪರ್ಲೀಮಿಲ್ ಹಾಡುತ್ತಿದ್ದಳೊ ಆ ದೈವಗಳ ಉಪ್ಪಿನ ಕಣ್ಣೀರು ಇಲ್ಲಿ ಒಣಗಿದೆ. ಇಲ್ಲಿಯ ಗುಂಪಿನ ಜನರ ಜೀವವನ್ನು ನೀನು ಬರಿದುಮಾಡಿದೆ. ಆಗ ಅವರು ಕಣ್ಣೀರು ಸುರಿಸಿದರು. ಏ ಹೇಡಿಯೇ. ನೀನು ಇಲ್ಲಿಯೇ ಕುಳಿತು ನೀನು ಮಾಡಿದ ಕೆಲಸದ ಪರಿಣಾಮವನ್ನು ನೋಡುತ್ತಿರು.'

ಎಂದು ಹೇಳಿದ ಕೂಡಲೇ ದೈವ ಟಿರ್ಲ್ವಾ ನನ್ನು ಭೂಮಿಗೆ ಕೆಡವಿತು, ಈಟಿ ಅವನನ್ನು ಮತ್ತಷ್ಟು ಚುಚ್ಚಿಕೊಂಡಿತ್ತು.

ಕಾಲಕ್ರಮೇಣ, ದೈವ ಶಕ್ತಿಯ ಪರಿಣಾಮವಾಗಿ, ಆ ಪುರುಷ ಮತ್ತು ಈಟಿ ಎರಡೂ ಕಲ್ಲಾಗಿಹೋದವು. ಟಿರ್ಲ್ವಾ ನ ಕಾಲಿನ ಬಳಿ ಸುಂದರವಾದ ಕೆಂಪು ಹೂವುಗಳು ಬೆಳೆದು ಹರಡಿಕೊಂಡವು. ಇದೇ ಉಪ್ಪು ನೀರಿನ ಸರೋವರವಿರುವ ಪಶ್ಚಿಮ ಬಯಲಿನ ಕೀರ್ತಿ. ಅದನ್ನು ಸ್ಟರ್ಟ್ ಮರುಭೂಮಿ ಬಟಾಣಿ ಹೂವು ಎಂದು ಕರೆಯುತ್ತೇವೆ. ಆದರೆ ಹಳೆಯ ಬುಡಕಟ್ಟನವರಿಗೆ ಅದು ರಕ್ತ ಪುಷ್ಪ ಎನಿಸುತ್ತದೆ.

●